
ಇರುವ ಕೆಲವು ನಿರೂಪಣೆಗಳಲ್ಲಿ ಕೂಡ ಸ್ವಮೋಹ ಹಾಗೂ ರಂಜಕಗುಣಗಳು ಎದ್ದುಕಾಣುವಂತಿವೆ. ಆ ಕಾರಣದಿಂದಾಗಿ, ಪತ್ರಿಕೋದ್ಯಮ ಮತ್ತು ಪತ್ರಕರ್ತರನ್ನು ವಸ್ತುವನ್ನಾಗಿ ಒಳಗೊಂಡಿರುವ ಈ ಕೃತಿ ಸಹೃದಯರ ಗಮನಸೆಳೆಯುತ್ತದೆ. ಬದುಕು ಹಾಗೂ ವೃತ್ತಿಜೀವನದಲ್ಲಿನ ಕಹಿಗಳಂತೆಯೇ ಸಾರ್ಥಕ ಕ್ಷಣಗಳನ್ನೂ ಒಳಗೊಂಡಿರುವ ಕಾರಣದಿಂದಾಗಿ '... ಉಳಿದಾವ ನೆನಪು' ಕೃತಿ ಗಮನಸೆಳೆಯುತ್ತದೆ. ತಮ್ಮ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸಿದ ಪತ್ರಿಕೆಯ ಕುರಿತು ಅಭಿಮಾನದಿಂದ ಬರೆಯುವ ಅವರು, ಕೆಲವೊಮ್ಮೆ ತಮ್ಮ ಸ್ಥಾನದಿಂದ ಅಂತರ ಕಾಯ್ದುಕೊಂಡು ಅನಿಸಿಕೆಗಳನ್ನು ದಾಖಲಿಸಿರುವುದೂ ಇದೆ.

ವರದಿಗಾರರಾಗಿ ಬೆಳಗಾವಿಯಲ್ಲಿ ಕಾರ್ಯ ನಿರ್ವಹಿಸಿದ ದಿನಗಳು ಹಾಗೂ ಕಾರ್ಯ ನಿರ್ವಾಹಕ ಸಂಪಾದಕರಾಗಿ ಪತ್ರಿಕೆಯನ್ನು ರೂಪಿಸಲು ದೊರೆತ ಅವಕಾಶದ ಘಟನೆಗಳು ಪುಸ್ತಕದ ಬಹು ಭಾಗವನ್ನು ಆವರಿಸಿಕೊಂಡಿವೆ. ಬೆಳಗಾವಿಯಲ್ಲಿನ ವರದಿಗಾರಿಕೆಯ ಸಂದರ್ಭದಲ್ಲಿ ಎದುರಿಸಬೇಕಾದ ಸವಾಲುಗಳ ವಿವರಗಳು ವಿಸ್ತೃತವಾಗಿವೆ, ಕುತೂಹಲಕರವಾಗಿವೆ, ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಪಾಠದಂತಿವೆ. ಪತ್ರಕರ್ತನಾಗಿ ವೃತ್ತಿಜೀವನದುದ್ದಕ್ಕೂ ಲೇಖಕರು ಉಳಿಸಿಕೊಂಡು ಬಂದ ಆತ್ಮಘನತೆ ಹಾಗೂ ಪ್ರಾಮಾಣಿಕತೆಯ ವಿವರಗಳು ಕೃತಿಯುದ್ದಕ್ಕೂ ಇವೆ. ಈ ವಿವರಗಳು ಪತ್ರಕರ್ತನೊಬ್ಬನ ವ್ಯಕ್ತಿತ್ವದ ಸ್ವರೂಪ ಯಾವ ರೂಪದಲ್ಲಿರಬೇಕು ಎನ್ನುವುದನ್ನು ಹೊಸ ತಲೆಮಾರಿಗೆ ನೆನಪಿಸುವಂತಿವೆ ಹಾಗೂ ಪತ್ರಿಕೋದ್ಯಮದ ಬಗ್ಗೆ ನಿರೀಕ್ಷೆಗಳನ್ನು ಉಳಿಸಿಕೊಂಡಿರುವವರಿಗೆ ಆಪ್ತವೆನ್ನಿಸುತ್ತವೆ.

ಸಾಮಾನ್ಯ ಕುಟುಂಬದಿಂದ ಬಂದ ತರುಣನೊಬ್ಬ ತನ್ನ ಪ್ರತಿಭೆ, ಪ್ರಾಮಾಣಿಕತೆ ಹಾಗೂ ಶ್ರಮದಿಂದ ಉನ್ನತ ಹಂತಕ್ಕೆ ತಲುಪಿದ ಯಶಸ್ವಿನ ಕಥನದ ರೂಪದಲ್ಲೂ ಪದ್ಮರಾಜ ದಂಡಾವತಿ ಅವರ ಕೃತಿಯನ್ನು ನೋಡಬಹುದು. ಬೋಧಕನಾಗಲು ಹಂಬಲಿಸಿ ಆಕಸ್ಮಿಕವಾಗಿ ಪತ್ರಕರ್ತನಾದರೂ, ತಮ್ಮ ವೃತ್ತಿಯಲ್ಲೂ ಅವರು ಬೋಧಕನ ಗುಣ ಉಳಿಸಿಕೊಂಡಿರುವುದಕ್ಕೆ ಕೃತಿಯಲ್ಲಿ ಸಾಕಷ್ಟು ಉದಾಹರಣೆಗಳಿವೆ.

ಪತ್ರಕರ್ತರ ಬಗ್ಗೆ ಕುತೂಹಲ ಹಾಗೂ ಅನುಮಾನ ಎರಡೂ ಇರುವ ದಿನಗಳಲ್ಲಿ ಹಿರಿಯ ಪತ್ರಕರ್ತರ ವೃತ್ತಿಜೀವನದ ಕುರಿತ ಕಥನಗಳು ಕುತೂಹಲ ಹುಟ್ಟಿಸುವುದು ಸಹಜ. ಇಂಥ ಕುತೂಹಲವನ್ನು '... ಉಳಿದಾವ ನೆನಪು' ತಕ್ಕಮಟ್ಟಿಗೆ ತಣಿಸುತ್ತದೆ ಕೂಡ. ಆದರೆ, ಇಂಗ್ಲಿಷ್ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿರುವ ಪತ್ರಕರ್ತರ ಕಥನಗಳನ್ನು ಜೊತೆಗಿಟ್ಟು ನೋಡಿದಾಗ ಗೋಚರಿಸುವ ಕನ್ನಡದ ನಿರೂಪಣೆಗಳ ಮಿತಿ ಪದ್ಮರಾಜರ ಕೃತಿಯಲ್ಲೂ ಕಾಣಿಸುತ್ತದೆ. ಇದು ಈ ಕೃತಿಯ ಅಥವಾ ಕೃತಿಗಾರರ ಕೊರತೆಯಾಗಿರದೆ, ಕನ್ನಡ ಪತ್ರಿಕೋದ್ಯಮ ಜಗತ್ತು ವಿಸ್ತಾರಗೊಳ್ಳಬೇಕಾದ ಅಗತ್ಯವನ್ನು ಸೂಚಿಸುವಂತಿದೆ. ●




**...ಉಳಿದಾವ ನೆನಪು**
ಲೇ: ಪದ್ಮರಾಜ ದಂಡಾವತಿ
ಪು: 224; ಬೆ: 250
ಪ್ರ: ಅಂಕಿತ ಪುಸ್ತಕ, ಬೆಂಗಳೂರು.
ಫೋನ್: 9019190502